# ಖರೀದಿಗೆ ಸಾಥ್ ಕೊಡುವ ‘ಸಾಥಿ’

ವ್ಯಾಪಾರಿಯೊಂದಿಗೆ ವ್ಯವಹರಿಸಿ ವಸ್ತುವನ್ನು ಖರೀದಿಸುವ ನೈಜ ಅನುಭವ ಕಟ್ಟಿಕೊಡಲು ಹಾಗೂ ಮೊದಲ ಬಾರಿಗೆ ಆನ್‌ಲೈನ್ ಮೂಲಕ ಖರೀದಿ ಮಾಡಬಯಸುವ ಬಳಕೆದಾರರಿಗೆ ನೆರವಾಗುವ ಸಲುವಾಗಿ ವಾಲ್‌ಮಾರ್ಟ್ ಒಡೆತನದ ಆನ್‌ಲೈನ್ ಮಾರಾಟ ಕಂಪನಿ ಫ್ಲಿಪ್‌ಕಾರ್ಟ್, ‘ಫ್ಲಿಪ್‌ಕಾರ್ಟ್ ಸಾಥಿ’ ಅನ್ನೋ ಸ್ಮಾರ್ಟ್ ವಾಯ್ಸ್ ಅಸಿಸ್ಟೆಂಟ್ ಫೀಚರ್ ಅನ್ನು ಪರಿಚಯಿಸಿದೆ.



ಫ್ಲಿಪ್‌ಕಾರ್ಟ್ ಮೂಲಕ ಇದೇ ಮೊದಲ ಬಾರಿಗೆ ಶಾಪಿಂಗ್ ಮಾಡುವ ಗ್ರಾಹಕರಿಗೆ ಈ ಫೀಚರ್ ಹೆಚ್ಚು ಸಹಾಯಕ. ‘ಸಾಥಿ’ ಅನ್ನೋದು ಸ್ಮಾರ್ಟ್ ಅಸಿಸ್ಟೆಂಟಿವ್ ಇಂಟರ್‌ಫೇಸ್’ ಫೀಚರ್ ಆಗಿದ್ದು, ಆನ್‌ಲೈನ್ ಮಾರಾಟ ಕಂಪನಿಗಳಲ್ಲಿ ಗ್ರಾಹಕರ ಹಾಗೂ ಕಂಪನಿಯ ಸಂಬಂಧ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸಲಿದೆ.

ಫ್ಲಿಪ್‌ಕಾರ್ಟ್‌ನಲ್ಲಿನ ಗ್ರಾಹಕರ ಖರೀದಿ ಪ್ರಕ್ರಿಯೆಯನ್ನು, ಸಹಜ ಮಾರುಕಟ್ಟೆಗಳಲ್ಲಿನ ವ್ಯವಹಾರದಂತೆಯೇ ಕಟ್ಟಿಕೊಡುವುದು ಈ ಫೀಚರ್‌ನ ಮೂಲ ಉದ್ದೇಶ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಯಲ್ಲಷ್ಟೇ ಸದ್ಯ ಇದು ಕಾರ್ಯನಿರ್ವಹಿಸಲಿದೆ. ಅಮೆಜಾನ್‌ನ ಅಲೆಕ್ಸಾಕ್ಕಿಂತ ‘ಸಾಥಿ’ ವಿಭಿನ್ನವಾಗಿದೆ ಎನ್ನಬಹುದು. ಭಾರತದ ಗ್ರಾಮೀಣ ಪ್ರದೇಶ, ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿನ ಜನರನ್ನು ತನ್ನ ಗ್ರಾಹಕರನ್ನಾಗಿಸಿಕೊಳ್ಳುವ ನಿಟ್ಟಿನಲ್ಲಿ ಕಂಪನಿಯು ಈ ಫೀಚರ್ ಪರಿಚಯಿಸಿದೆ. ‘ರಿಲಯನ್ಸ್ ಸೇರಿದಂತೆ ಇತರೆ ಇ ಕಾಮರ್ಸ್ ಗ್ರಾಹರನ್ನು ತನ್ನತ್ತ ಸೆಳೆಯಲು ಈ ‘ಸಾಥಿ’ ಸಹಾಯಕವಾಗಲಿದೆ’ ಎನ್ನುವುದು ಕಂಪನಿಯ ನಿರೀಕ್ಷೆ.

### ಹೇಗೆ ಕೆಲಸ ಮಾಡುತ್ತೆ?

‘ಫ್ಲಿಪ್‌ಕಾರ್ಟ್ ಸಾಥಿ’ ವಾಸ್ತವಿಕ ಬದುಕಿನ ಶಾಪಿಂಗ್ ಅನುಭವವನ್ನು ಅನುಕರಿಸುತ್ತದೆ. ಸೇಲ್ಸ್‌ಮ್ಯಾನ್‌ಗಳೊಂದಿಗೆ ವ್ಯವಹರಿಸಿ ವ್ಯಾಪಾರ ಮಾಡಬಯಸುವ ಗ್ರಾಹಕರಿಗೆ ಅದೇ ಅನುಭವವನ್ನು ಆನ್‌ಲೈನ್ ಮೂಲಕವೂ ಕಟ್ಟಿಕೊಡುವ ಸಲುವಾಗಿ ಇದು ಕಾರ್ಯನಿರ್ವಹಿಸುತ್ತದೆ. ಆಡಿಯೊ ಹಾಗೂ ಟೆಕ್ಸ್ಟ್ ರೂಪದ ಸೂಚನೆಗಳನ್ನು ಹೊಸ ಬಳಕೆದಾರರಿಗೆ ನೀಡಿ ಖರೀದಿ ಪ್ರಕ್ರಿಯೆಗೆ ನೆರವಾಗುತ್ತದೆ.

ಈ ಫೀಚರ್‌ನ ಸೇವೆ ಪಡೆಯಲು ಗ್ರಾಹಕರು ಫ್ಲಿಪ್‌ಕಾರ್ಟ್ ಆ್ಯಪ್ ಅನ್ನು ಹೊಸ ವರ್ಶನ್‌ಗೆ ಅಪ್‌ಡೇಟ್ ಮಾಡಿಕೊಳ್ಳಬೇಕು. ಬಳಿಕ ಆ್ಯಪ್‌ಗೆ ಲಾಗಿನ್ ಆಗಿ, ಪರದೆಯ ಮೇಲ್ಭಾಗದಲ್ಲಿ ಕಾಣುವ ‘ಸಾಥಿ’ ಐಕಾನ್ ಕ್ಲಿಕ್ಕಿಸಬೇಕು. ಕ್ಲಿಕ್ಕಿಸಿದೊಡನೆ, ದೃಶ್ಯ ಮತ್ತು ಧ್ವನಿ (ವಿಶ್ಯುವಲ್ ಹಾಗೂ ವಾಯ್ಸ್) ಸೂಚನೆಗಳನ್ನು ‘ಸಾಥಿ’ ಒದಗಿಸುತ್ತದೆ. ಖರೀದಿ ಪ್ರಕ್ರಿಯೆಗೆ ಏನು ಮಾಡಬೇಕು ಎಂಬುದನ್ನು ತೋರುತ್ತದೆ. ಬಳಕೆದಾರರು ತಮಗಿಷ್ಟದ ವಸ್ತುವನ್ನು ಸರ್ಚ್ ಬಾರ್‌ನಲ್ಲಿ ಹುಡುಕಿ ಆಯ್ಕೆ ಮಾಡಿಕೊಳ್ಳಬೇಕು. ನಿಗದಿತ ವಿಷಯಗಳ ಸಹಾಯಕ್ಕೆ ಮಾತ್ರ ‘ಸಾಥಿ’ಯ ಸಹಾಯ ಪಡೆಯಬಹುದು. ■

# ಅಮೆಜಾನ್‌ನಲ್ಲಿ ‘ಅಲೆಕ್ಸಾ’

ಅಮೆಜಾನ್‌ನ ಕೃತಕ ಬುದ್ಧಿಮತ್ತೆ (ಆರ್ಟಿಫೀಶಿಯಲ್ ಇಂಟಲಿಜೆನ್ಸ್) ಅಸಿಸ್ಟೆಂಟ್ ‘ಅಲೆಕ್ಸಾ’. ಫ್ಲಿಪ್‌ಕಾರ್ಟ್‌ನ ‘ಸಾಥಿ’ಗಿಂತ ವಿಭಿನ್ನವಾಗಿ ಆನ್‌ಲೈನ್‌ನಲ್ಲಿ ಶಾಪಿಂಗ್ ಮಾಡಲು ಗ್ರಾಹಕರಿಗೆ ನೆರವಾಗುತ್ತದೆ. ಆದರೆ, ‘ಸಾಥಿ’ ಉಚಿತವಾಗಿ ಲಭ್ಯವಾದರೆ, ‘ಅಲೆಕ್ಸಾ’ಗೆ ಹಣ ಪಾವತಿಸಬೇಕು.

ಅಮೆಜಾನ್‌ನಿಂದ ವಸ್ತುವೊಂದನ್ನು ಖರೀದಿಸಬೇಕಾದರೆ, ಅದರ ವೆಬ್‌ಸೈಟ್‌ಗೆ ಭೇಟಿ ನೀಡಲೇಬೇಕು. ತನ್ನ ಗ್ರಾಹಕರು ವೆಬ್‌ಸೈಟ್‌ಗೆ ಹೋಗದೆಯೇ ಅದರಲ್ಲಿನ ವಸ್ತುವನ್ನು ಖರೀದಿಗೆ ನೆರವಾಗಲು ಅಮೆಜಾನ್ ‘ಅಲೆಕ್ಸಾ’ವನ್ನು ಅಭಿವೃದ್ಧಿ ಮಾಡಿ ಬಿಡುಗಡೆಗೊಳಿಸಿದೆ ಮಾಡಿದೆ.

ಅಲೆಕ್ಸಾವನ್ನು ಆನ್ ಮಾಡಿ, ಅದಕ್ಕೆ ಅಂತರ್ಜಾಲ ಸಂಪರ್ಕವನ್ನು ಮೊದಲು ಕಲ್ಪಿಸಬೇಕು. ನಂತರ, ಗ್ರಾಹಕರು ತಮಗೆ ಬೇಕಿರುವ ವಸ್ತುವನ್ನು ಖರೀದಿಸು ಎಂದು ಅಲೆಕ್ಸಾಗೆ ಧ್ವನಿಯ ಮೂಲಕ ಹೇಳಬೇಕು (ಕಮಾಂಡ್ ಮಾಡಬೇಕು). ಅಂತರ್ಜಾಲದ ಮೂಲಕ ಅಮೆಜಾನ್‌ನೊಂದಿಗೆ ಸಂಪರ್ಕ ಸಾಧಿಸಿರುವ ಅಲೆಕ್ಸಾ, ತನಗೆ ಸಿಕ್ಕ ಧ್ವನಿಯ ಕಮಾಂಡ್ ಅನ್ನು ಆಧರಿಸಿ ಆ ವಸ್ತುವನ್ನು ವೆಬ್‌ಸೈಟ್‌ನಲ್ಲಿ ಜಾಲಾಡಿ, ‘ನಿಮಗೆ ಬೇಕಾದ ವಸ್ತು ಲಭ್ಯವಿದೆ’ ಎಂಬುದನ್ನು ಧ್ವನಿ ಸೂಚನೆಯ ಮೂಲಕ ತಿಳಿಸುತ್ತದೆ. ಬಳಿಕ ಬಳಕೆದಾರರು ಆರ್ಡರ್ ಅನ್ನು ಧ್ವನಿಯ ಮೂಲಕವೇ ದೃಢೀಕರಿಸಿದರೆ, ಆರ್ಡರ್ ಬುಕ್ ಆಗುತ್ತದೆ. ಒಂದು ವೇಳೆ ಬಳಕೆದಾರರಿಗೆ ಬೇಕಿರುವ ವಸ್ತು ವೆಬ್‌ಸೈಟ್‌ನಲ್ಲಿ ಲಭ್ಯವಿಲ್ಲದಿದ್ದರೆ ಆ ಬಗ್ಗೆಯೂ ಮಾಹಿತಿ ನೀಡುತ್ತದೆ.

ಬಳಕೆದಾರರ ಆರ್ಡರ್ ಅನ್ನು ಅಲೆಕ್ಸಾ ಮೂಲಕವೇ ಟ್ರ್ಯಾಕ್ ಮಾಡಬಹುದು.





ತಮ್ಮ ಆರ್ಡರ್ ಎಲ್ಲಿದೆ, ಪ್ಯಾಕ್ ಆಗಿದೆಯೇ, ಡಿಸ್‌ಪ್ಯಾಚ್ ಆಗಿದೆಯೇ ಅಥವಾ ಯಾವಾಗ ತಲುಪುತ್ತದೆ ಎಂಬುದನ್ನೆಲ್ಲ ಸುಲಭವಾಗಿ ಟ್ರ್ಯಾಕ್ ಮಾಡಬಹುದು. ಅಮೆಜಾನ್ ಡೀಲ್ಸ್ ಹಾಗೂ ಡಿಸ್ಕೌಂಟ್ ಬಗ್ಗೆಯೂ ತಿಳಿಸುವ ಅಲೆಕ್ಸಾದ ಬಳಕೆಗೆ ಬಳಕೆದಾರರು ಅಮೆಜಾನ್ ಪ್ರೈಮ್ ಮೆಂಬರ್‌ಶಿಪ್ ಹಾಗೂ ಅಮೆಜಾನ್ ಖಾತೆ ಹೊಂದಿರಬೇಕು.

ವೆಬ್‌ಸೈಟ್‌ನಲ್ಲಿ ಖರೀದಿಗಷ್ಟೇ ಅಲ್ಲದೇ ಅಲಾರಾಂ, ರಿಮೈಂಡರ್, ಸುದ್ದಿ ಮತ್ತು ಮಾಹಿತಿ, ಕರೆ, ಸಂದೇಶ, ಕ್ರೀಡಾ ಮಾಹಿತಿ, ಸ್ಮಾರ್ಟ್ ಹೋಮ್ (ಲೈಟ್ ಹಾಗೂ ಎಸಿ ನಿರ್ವಹಣೆ), ಸಂಗೀತ ಸೇರಿದಂತೆ ಹಲವು ರೀತಿಯಾಗಿ ‘ಅಲೆಕ್ಸಾ’ ನೆರವಿಗೆ ಬರುತ್ತದೆ.

ಅಲೆಕ್ಸಾ ಬಳಕೆದಾರರ ಖರೀದಿ ಹಿನ್ನೆಲೆಯನ್ನು ಆಧರಿಸಿ ನೋಡುವುದಾದರೆ, ‘ಅಲೆಕ್ಸಾ’ ಖರೀದಿ ಪ್ರಕ್ರಿಯೆಗೆ ಅತ್ಯಂತ ಅವಶ್ಯಕ ಹಾಗೂ ಸಹಾಯಕಾರಿ ಎನ್ನಲಾಗಿದೆ. ಅಲೆಕ್ಸಾ ಎಂಬುದು ಸ್ಮಾರ್ಟ್ ಸ್ಪೀಕರ್ ರೂಪದಲ್ಲಾಗಿದ್ದು, ಅದರ ಮೂಲ ಸ್ವರೂಪ ‘ಎಕೋ ಡಾಟ್’ನದ್ದು. ‘ಅಲೆಕ್ಸಾ’ವನ್ನು ಪ್ರತ್ಯೇಕವಾಗಿ ಹಣ ಪಾವತಿಸಿ ಖರೀದಿಸಬೇಕು.

■ ಶಶಿಕುಮಾರ್ ಸಿ.